**ಎಂ.ವಿ.ಸಿ. ನಂ. 1010/2024**
**ಪಿಡಬ್ಲ್ಯೂ -1**

(ಇಂದು ದಿನಾಂಕಃ 24-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಂದುವರಿದ ಮುಖ್ಯ ವಿಚಾರಣೆ ಮಧ್ಯಂತರ ಆದೇಶದ ಮೇರೆಗೆ ಮುಖ್ಯ ವಿಚಾರಣೆಃ**

**ಶ್ರೀ NHR ವಕೀಲರಿಂದಃ**

ಎದುರುದಾರರ ತಕರಾರಿಗೆ ಒಳಪಟ್ಟು ಅರ್ಜಿದಾರರ ದೃಢಿಕೃತ ಆಧಾರದ ಪ್ರತಿಗಳನ್ನು ನಿ.ಪಿ- 10 ರಿಂದ ನಿ.ಪಿ- 13 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ವಿ.ಆರ್.ಎಮ್. ವಕೀಲರಿಂದಃ**

ಮೃತ ಸುಭಾಷ ನನ್ನ ಗಂಡ. ಅಪಘಾತವು ಇಸ್ನಾನಪೂರ ಹತ್ತಿರ ದಿಃ 17-05-2024 ರಂದು ಆಗಿರುತ್ತದೆ. ಅಪಘಾತವು ತೆಲಂಗಾಣ ರಾಜ್ಯದಲ್ಲಿ ಆಗಿರುತ್ತದೆ, ಪ್ರಕರಣವು ತೆಲಂಗಾಣ ರಾಜ್ಯದಲ್ಲಿ ದಾಖಲು ಆಗಿರುತ್ತದೆ ಎಂದರೆ ಸರಿ. ನಾನು ದೂರು ನೀಡುವಾಗ ತೆಲಂಗಾಣದಲ್ಲಿ ಇರುತ್ತೇವೆ ಎಂದು ಬರೆಸಿರುತ್ತೇನೆ ಎಂದರೆ ಸರಿ. ನಾವು ಕರ್ನಾಟಕದಲ್ಲಿ ವಾಸಿಸುತ್ತೇವೆ ಎಂದು ತೋರಿಸಲು ನಮ್ಮ ಗುರುತಿನ ಚೀಟಿಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಮೂಲ ಆಧಾರ ಕಾರ್ಡಗಳನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ ಎಂದರೆ ಸರಿ.

ಅಪಘಾತವು ನನ್ನ ಗಂಡ ರಸ್ತೆ ದಾಟುವಾಗ ಆಗಿರುತ್ತದೆ. ಅಪಘಾತವಾದ ಸ್ಥಳ ರಾಷ್ಟ್ರೀಯ ಹೆದ್ದಾರಿ ಇರುತ್ತದೆ ಎಂದರೆ ಸರಿ. ರಾಷ್ಟ್ರೀಯ ಹೆದ್ದಾರಿಯು ಚತುರ್ಪಥ ರಸ್ತೆ ಇದೆ ಎಂದರೆ ಸರಿಯಲ್ಲ. ಅದರ ನಡುವೆ ವಿಭಜಕ ನಿರ್ಮಿಸಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ-5 ರಲ್ಲಿ ಅಪಘಾತವಾದ ಸ್ಥಳದ ನಕ್ಷೆಯನ್ನು ತೋರಿಸಿರುತ್ತಾರೆ ಎಂದರೆ ಸರಿ. ಅದರಲ್ಲಿ ವಿಭಜಕ ತೋರಿಸಿರುತ್ತಾರೆ ಎಂದರೆ ಸರಿ. ನಿ.ಪಿ-5 ರಲ್ಲಿ ರಸ್ತೆ ದಾಟಲು ಯಾವುದೇ ಮಾರ್ಗಸೂಚಿ ಇರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ-5 ರಲ್ಲಿ ಅಪಘಾತವು ರಸ್ತೆಯ ಮಧ್ಯೆ ಆಗಿರುತ್ತದೆ ಎಂದು ತೋರಿಸಿರುತ್ತಾರೆ ಎಂದರೆ ಅಪಘಾತವು ರಸ್ತೆಯ ಬದಿಗೆ ಆಗಿರುತ್ತದೆ. ಅಪಘಾತವು ಸಾಯಂಕಾಲ ಆಗಿರುತ್ತದೆ. ನನ್ನ ಗಂಡ ಮಧ್ಯಪಾನ ಕುಡಿದು ರಸ್ತೆಯನ್ನು ದಾಟುವಾಗ ಆತನ ತಪ್ಪಿ ನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಅಪಘಾತವು ನನ್ನ

ಗಂಡನ ತಪ್ಪಿ ನಿಂದ ಆಗಿದ್ದರೂ ಸಹ ಪರಿಹಾರ ಹಣ ಪಡೆಯಲು ಸುಳ್ಳು ದೂರನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ-7 ರಲ್ಲಿ ಅಪಘಾತದ ಗಾಯಗಳಿಂದ ನನ್ನ ಗಂಡ ಮೃತ ಪಟ್ಟಿರುತ್ತಾರೆ ಎಂದು ನಮೂದಿಸಿಲ್ಲ ಎಂದರೆ ಸರಿಯಲ್ಲ.

ಅಪಘಾತವಾದ ನಂತರ ನನ್ನ ಗಂಡನನ್ನು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಅಪಘಾತವಾದಾಗ ನಾನು ಸ್ಥಳದಲ್ಲಿ ಇರಲಿಲ್ಲ. ನಾನು ಅಪಘಾತದ ವಿಷಯವನ್ನು ಫೋನ್ ಮುಖಾಂತರ ತಿಳಿದು ಆಮೇಲೆ ಆಸ್ಪತ್ರೆಗೆ ಹೋಗಿರುತ್ತೇನೆ. ನಾನು ಆಸ್ಪತ್ರೆಗೆ ಹೋದಾಗ ನನ್ನ ಗಂಡ ಮೊದಲೇ ತೀರಿಕೊಂಡಿರುತ್ತಾನೆ. ಒಂದು ದಿನ ಆತನ ಹೆಣ ಆಸ್ಪತ್ರೆಯಲ್ಲಿ ಇತ್ತು. ಅಪಘಾತವು ರಾತ್ರಿ 11:50 ಕ್ಕೆ ಆಗಿರುತ್ತದೆ ಎಂದು ದೂರಿನಲ್ಲಿ ನಮೂದಿಸಿರುತ್ತೇನೆ ಎಂದರೆ ನಾನು ದೂರನ್ನು ನೀಡಿರುವುದಿಲ್ಲ. ಪೋಲೀಸರೇ ದೂರನ್ನು ನೀಡಿರುತ್ತಾರೆ.

ನನ್ನ ಗಂಡ ಮೃತ ಪಟ್ಟಾಗ ಆತನಿಗೆ 35 ವರ್ಷ ವಯಸ್ಸು ಇತ್ತು. ನಿ.ಪಿ-9 ರ ಪ್ರಕಾರ ನನ್ನ ಗಂಡನ ವಯಸ್ಸು 37 ಆಗುತ್ತದೆ ಎಂದರೆ ಸರಿಯಲ್ಲ. ನನ್ನ ಗಂಡನ ಜನನ ಪ್ರಮಾಣ ಪತ್ರವನ್ನು ಹಾಜರು ಪಡಿಸಿಲ್ಲ ಎಂದರೆ ಸರಿ. ನಿ.ಪಿ-7 ರಲ್ಲಿ ನನ್ನ ಗಂಡನ ವಯಸ್ಸು 37 ಎಂದು ನಮೂದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಹೆಚ್ಚಿ ನ ಪರಿಹಾರ ಹಣವನ್ನು ಪಡೆಯಲು ನನ್ನ ಗಂಡನ ವಯಸ್ಸು 35 ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮನೆಯವರನ್ನು ಬಿಟ್ಟು ನನ್ನ ಮನೆಯವರಿಗೆ 3 ಜನ ಅಣ್ಣ ತಮ್ಮಂದಿರು. ನನ್ನ ಗಂಡ ಟೈಲ್ಸ್ ಫಿಟ್ಟಿಂಗ್ ಕೆಲಸ ಮಾಡುತ್ತಿದ್ದ. ನಾನು ಪೋಲೀಸರ ಮುಂದೆ ನನ್ನ ಗಂಡ ಟೈಲ್ಸ್ ಫಿಟ್ಟಿಂಗ್ ಕೆಲಸ ಮಾಡುತ್ತಾನೆ ಎಂದು ಹೇಳಿಕೆಯನ್ನು ನೀಡಿರುತ್ತೇನೆ.

ನಿ.ಪಿ-6 ರಲ್ಲಿ ನನ್ನ ಗಂಡ ಇಸ್ಲಾಪೂರು ಫಂಕ್ಷನ್ ಹಾಲ್ ನಲ್ಲಿ ಕೆಲಸ ಮಾಡಿ ಬರುವಾಗ ಅಪಘಾತವಾಗಿರುತ್ತದೆ ಎಂದು ಬರೆಸಿರುತ್ತೇನೆ ಎಂದರೆ ಸರಿ. ನನ್ನ ಗಂಡ ಟೈಲ್ಸ್ ಫಿಟ್ಟಿಂಗ್ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಫಂಕ್ಷನ್ ಹಾಲ್ ನಲ್ಲಿ ಕಾರ್ಯಕ್ರಮ ಇದ್ದಾಗ ಮಾತ್ರ ಕೆಲಸ ಮಾಡುತ್ತಿದ್ದ ಎಂದರೆ ಸರಿಯಲ್ಲ. ನನ್ನ ಗಂಡ ತಿಂಗಳಿಗೆ 30 ಸಾವಿರ ರೂ. ಗಳಿಕೆ ಮಾಡುತ್ತಿರಲಿಲ್ಲ

ಎಂದರೆ ಸರಿಯಲ್ಲ. ನಾನು ಒಕ್ಕಲುತನ ಮಾಡುತ್ತೇನೆಂದು ನನ್ನ ಅರ್ಜಿಯಲ್ಲಿ ಬರೆಸಿರುತ್ತೇನೆ ಎಂದರೆ ಸರಿ. ನನ್ನ ಇಬ್ಬರು ಮಕ್ಕಳು ಶಾಲೆ ಕಲಿಯುತ್ತಿದ್ದಾರೆ ಎಂದು ತೋರಿಸಲು ದಾಖಲಾತಿಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮಕ್ಕಳು, ಅತ್ತೆ ನನ್ನ ಗಂಡನ ಗಳಿಕೆಯ ಮೇಲೆ ಅವಲಂಬಿತರಾಗಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಅತ್ತೆ ಆಕೆಯ ಇನ್ನುಳಿದ 3 ಜನ ಮಕ್ಕಳ ಬಳಿ ವಾಸ ಇರುತ್ತಾಳೆ ಎಂದರೆ ಸರಿಯಲ್ಲ. ಆಕೆಯ ಆರೈಕೆಯನ್ನು ಅವರೇ ಮಾಡುತ್ತಾರೆ ಎಂದರೆ ಸರಿಯಲ್ಲ. ಅಪಘಾತವು ದ್ವಿ ಚಕ್ರ ವಾಹನದ ತಪ್ಪಿ ನಿಂದ ಆಗಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಮದ್ಯಪಾನ ಕುಡಿದು ರಸ್ತೆಯನ್ನು ದಾಟುವಾಗ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ. ಆತನ ತಪ್ಪಿ ನಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಪರಿಹಾರ ಹಣವನ್ನು ಪಡೆಯಲು ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ,
ಚಿಂಚೋಳಿ.